**ದಿನಾಂಕಃ 04-12-2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಪಾಟೀ ಸವಾಲು: 1 ಮತ್ತು 2 ನೇ ಆರೋಪಿತರ ಪರ ವಕೀಲರಾದ ಶ್ರೀ.ಪಿ.ಆರ್.ಕೆ.ವಕೀಲರಿಂದಃ**

ರಾಣೇಬೆನ್ನೂರಿನ ಎಪಿಎಂಸಿ ಯಲ್ಲಿ ನಮ್ಮ ಅಂಗಡಿ ಇರುತ್ತದೆ. ನನ್ನ ಹೆಸರಿನಲ್ಲಿ ಪ್ಯಾಟಸನ್ ಅಗ್ರೀ ಎಕ್ಸಪೋರ್ಟ್ಸ ಎಂಬ ಅಂಗಡಿ ಮತ್ತು ನನ್ನ ಹೆಂಡತಿಯ ಹೆಸರಿನಲ್ಲಿ ಪಾಟೀಲ ಆಗ್ರೋ ಏಜೆನ್ಸಿ ಪರ್ಟಿಲೈಸರ್ಸ ಎಂಬ ಅಂಗಡಿ ಎಪಿಎಂಸಿ ಯಾರ್ಡನಲ್ಲಿ ಇರುತ್ತವೆ. ಎಪಿಎಂಸಿ ಗೆ ಬರುವ ದಾನ್ಯಗಳನ್ನು ಎಪಿಎಂಸಿ ಯ ಕಾಯ್ದೆಯ ಪ್ರಕಾರ ಮಾರಾಟ ಮತ್ತು ಖರೀದಿ ಆಗಬೇಕು ಎಂದರೆ ಸರಿ. ಸದರಿ ಮಾರಾಟ ಮತ್ತು ಖರೀದಿ ಮಧ್ಯದಲ್ಲಿ ಯಾವುದಾದರೂ ಹಣದ ಬಗ್ಗೆ ತಂಟೆ ಬಂದರೆ ಎಪಿಎಂಸಿ ಗೆ ತಿಳಿಸಬೇಕು ಎಂದರೆ ಸರಿಯಲ್ಲ. ರೈತರಿಗೆ ಹಣ ಬರುವುದು ಬಾಕಿ ಇದ್ದರೆ ಅದನ್ನು ಎಪಿಎಂಸಿ ಗೆ ತಿಳಿಸಬೇಕಾಗುತ್ತದೆ. ಟ್ರೇಡರ್ಸಗಳ ಮದ್ಯ ಹಣ ಬರುವುದು ಬಾಕಿ ಇದ್ದರೆ ಅದನ್ನು ಎಪಿಎಂಸಿ ಗೆ ತಿಳಿಸಬೇಕಾಗಿಲ್ಲ. ವ್ಯಾಪಾರಸ್ಥರ ಮಧ್ಯ ತಂಟೆ ತಕರಾರು ಬಂದರೆ ಅದನ್ನು ಸಹ ಎಪಿಎಂಸಿ ಗೆ ತಿಳಿಸಬೇಕು ಎಂದರೆ ಸಾಕ್ಷಿ ಎಲ್ಲವನ್ನು ತಿಳಿಸುವ ಅವಶ್ಯಕತೆ ಇಲ್ಲ ಎಂದು ಹೇಳುತ್ತಾರೆ. ವ್ಯಾಪಾರಸ್ಥರ ಮಧ್ಯ ತೂಕ ಮತ್ತು ಡಿಲಿವರಿ ಸಂಬಂಧ ವಿವಾದ ಬಂದರೆ ಮಾತ್ರ ಎಪಿಎಂಸಿ ಗೆ ತಿಳಿಸಬೇಕು ಆದರೆ ಹಣಕಾಸಿನ ವಿಚಾರವನ್ನು ಎಪಿಎಂಸಿ ಗೆ ತಿಳಿಸುವ ಅವಶ್ಯಕತೆ ಇರುವುದಿಲ್ಲ. ಎಪಿಎಂಸಿ ಯಾರ್ಡನಲ್ಲಿ ಇರುವ ಅಂಗಡಿಗಳಲ್ಲಿ ಎಷ್ಟು ಸ್ಟಾಕ್ ಇದೆ ಎಂದು ಆವಕ ಪಟ್ಟಿಯನ್ನು ಎಪಿಎಂಸಿ ಗೆ ಕೊಡಬೇಕು ಎಂದರೆ ಸರಿ. ರೈತರಿಂದ ಬಂದ ಮಾಲಿನ ಬಗ್ಗೆ ದಲ್ಲಾಳ ರು ಎಪಿಎಂಸಿ ಗೆ ಆವಕ ಪಟ್ಟಿ ಕೊಡಬೇಕು , ನಾವು ಖರೀದಿದಾರರು ಆಗಿರುವುದರಿಂದ ಆವಕ ಪಟ್ಟಿ ಕೊಡುವ ಅವಶ್ಯಕತೆ ಇಲ್ಲ ಎಂದು ಹೇಳುತ್ತಾರೆ. ನಮ್ಮ ಬಳಿ ಎಷ್ಟು ಸ್ಟಾಕ್ ಇದೆ ಎಂದು ಎಪಿಎಂಸಿ ಗೆ ತಿಳಿಸುತ್ತೇವೆ ಮತ್ತು ಪ್ರತಿ ದಿನ ಖರೀದಿಯ ಬಗ್ಗೆ ತಿಳಿಸುತ್ತೇವೆ. ಮೆಕ್ಕೆಜೋಳಕ್ಕೆ ಯಾವುದೇ ಟೆಂಡರ ಪ್ರಕ್ರಿಯೆ ಇರುವುದಿಲ್ಲ.

ಆರೋಪಿ ಸಂಸ್ಥೆಗೆ ಮೆಕ್ಕೆಜೋಳವನ್ನು ಡಿಲಿವರಿ ಮಾಡಿದ ಬಗ್ಗೆ ಡಿಲಿವರಿ ನೋಟ್ ಇದೆಯೇ ಎಂದರೆ ಸಾಕ್ಷಿ ಬಿಲ್ ಇದೆ ಎಂದು ಹೇಳುತ್ತಾರೆ. ಮಾಲನ್ನು ಡಿಲಿವರಿ ಕೊಟ್ಟ ಬಗ್ಗೆ ಬಿಲ್ ನಲ್ಲಿ ಸಹಿ ಪಡೆಯುತ್ತೀರಾ ಎಂದರೆ ಸಾಕ್ಷಿ ನಾವು ಪಡೆಯುವುದಿಲ್ಲ ಎಂದು ಹೇಳುತ್ತಾರೆ. ಮೆಕ್ಕೆಜೋಳ ಆರೋಪಿತರಿಗೆ ತಲುಪಿದೆ ಎನ್ನುವ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ ನಾವು ಬಾಯಿ-ಮಾತಿನ ಮೂಲಕ ವ್ಯವಹಾರ ಮಾಡುತ್ತೇವೆ ಹಾಗೂ ಆರೋಪಿತರು ಸ್ವತಃ ಬಂದು ಚೆಕ್ ಕೊಟ್ಟು ಮೆಕ್ಕೆಜೋಳ ಖರೀದಿಸಿರುವುದರಿಂದ ಬಿಲ್ ನ ಮೇಲೆ ಸಹಿ ಪಡೆಯುವ ಅವಶ್ಯಕತೆ ಇಲ್ಲ ಎಂದು ಹೇಳುತ್ತಾರೆ.

ಈ ವ್ಯವಹಾರ ಕೊಲ್ಲಾಪುರದಲ್ಲಿ ಆಗಿರುವುದರಿಂದ ಮೆಕ್ಕೆಜೋಳ ಮಾರಾಟ ಮಾಡಿದ ವಿಚಾರವನ್ನು ಕರ್ನಾಟಕದ ಎಪಿಎಂಸಿ ಗೆ ತಿಳಿಸುವ ಅವಶ್ಯಕತೆ ಇಲ್ಲ ಎಂದು ಹೇಳುತ್ತಾರೆ. ಆರೋಪಿತರು ಫೋನ್ ನಲ್ಲಿಯೇ ಮಾಲು ಕಳುಹಿಸಿ ಎಂದು ಹೇಳಿ ಗಾಡಿ ಕಳುಹಿಸಿದ್ದರು. ದಿಃ 24-06-2016 ರಂದು ನಾವು ಎರಡು ಗಾಡಿ ಮೆಕ್ಕೆಜೋಳ ಕಳುಹಿಸಿದ್ದೇವು. ಆರೋಪಿತರು ಮಾಲು ಬೇಕು ಎಂದು ಹೇಳಿದ್ದರಿಂದ ನಮ್ಮ ಕೊಲ್ಲಾಪುರದ ಅಂಗಡಿಯಿಂದಲೇ ಡಿಲಿವರಿ ಕೊಟ್ಟಿರುತ್ತೇವೆ. ಆರೋಪಿತರು ಚೆಕ್ ನ್ನು ರಾಣೇಬೆನ್ನೂರಿನಲ್ಲಿ ಕೊಟ್ಟಿರುತ್ತಾರೆ. ಮಹಾರಾಷ್ಟ ದಲ್ಲಿ ಪ್ರತಿ ತಿಂಗಳು 20 ನೇ ತಾರೀಖಿನಂದು ರೀಟರ್ನ್ಸ ಸಲ್ಲಿಸಬೇಕಾಗುತ್ತದೆ. ನಮ್ಮ ಅಂಗಡಿಯಲ್ಲಿ ಕಂಪ್ಯೂಟರಾಜ್ಡ ಬಿಲ್ಲಿಂಗ್ ಇರುವುದರಿಂದ ಮಾರಾಟ ಮಾಡಿದ ಮೆಕ್ಕೆಜೋಳ ಸ್ಟಾಕ್ ನಿಂದ ಡಿಲಿಟ್ ಆಗಿರುತ್ತದೆ. ಈ ಬಗ್ಗೆ ಕಂಪ್ಯೂಟರ್ ನಲ್ಲಿ ದಾಖಲೆ ಇರುತ್ತದೆ. ಮಾಲನ್ನು ಡಿಲಿವರಿ ಕೊಟ್ಟಾಗ ಬಿಲ್ ನ್ನು ಕೊಡುತ್ತೇವೆ. ಬಿಲ್ ನ್ನು ಕೊಟ್ಟು ಹಿಂದೆ ಸಹಿ ಪಡೆಯುತ್ತೇವೆ ಎಂದರೆ ಸಾಕ್ಷಿ ಪಾರ್ಟಿ ಇದ್ದರೆ ಪಡೆಯುತ್ತೇವೆ ಚೆಕ್ ಕಳುಹಿಸಿ ಕೊಟ್ಟಾಗ ಸಹಿ ಪಡೆಯುವುದಿಲ್ಲ ಎಂದು ಹೇಳುತ್ತಾರೆ. ನಮ್ಮಲ್ಲಿ ಡಿಲಿವರಿ ಕೊಟ್ಟ ಬಗ್ಗೆ ಡಿಲಿವರಿ ನೋಟ್

ಪಡೆಯುವ ಪದ್ಧತಿ ಇರುವುದಿಲ್ಲ. ಬಿಲ್ ನ್ನು ಪಾರ್ಟಿಗೆ ಕೊಟ್ಟಿರುತ್ತೇವೆ. ಲಾರಿ ಜೊತೆ



ಬಿಲ್ ನ್ನು ಕಳುಹಿಸಿ ಕೊಟ್ಟಿರುತ್ತೇವೆ. ಚೆಕ್ ಪಡೆದು ಮಾಲನ್ನು ಡಿಲಿವರಿ ಕೊಟ್ಟಾಗ ಡಿಲಿವರಿ ಕೊಟ್ಟ ಬಗ್ಗೆ ಯಾವುದೇ ಪ್ರತ್ಯೇಕ ದಾಖಲೆ ಪಡೆಯುವುದಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದರಿಂದ ಮುಂದೂಡಲಾಗಿದೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ ರಾಣೇಬೆನ್ನೂರು.